ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ, ಸಿಂದಗಿ

ಉಪಸ್ಥಿತರು: ಶ್ರೀ ಮಹಾಂತೇಶ ಜಿ. ಭೂಸಗೋಳ, ಬಿ.ಎ.(ಲಾ), ಎಲ್.ಎಲ್.ಬಿ.
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.

ದಿನಾಂಕ ***09*** ನೇ ಮೇ ***2023***

ಕ್ರಿಮಿನಲ್ ಪ್ರಕರಣ ಸಂಖ್ಯೆ ***2427-2022***

ಅಬಕಾರಿ ಪೋಲಿಸರು,
ಸಿಂದಗಿ ……... ಫಿರ್ಯಾದುದಾರರು

ವಿರುದ್ಧ

1. ರಾಜಣ್ಣ ತಂದೆ ನಿಂಗಪ್ಪ ಹೋರ್ತಿ
ಸಾ: ಚಿಕ್ಕರೂಗಿ ತಾ: ಸಿಂದಗಿ ……. ಆರೋಪಿತರು

## ದೋಷಾರೋಪಣೆ

ಶ್ರೀ ಮಹಾಂತೇಶ ಜಿ. ಭೂಸಗೋಳ, ***ಬಿ.ಎ.(ಲಾ)***, ಎಲ್.ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಆದ ನಾನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಆರೋಪಿಯಾದ ನೀನು ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ .

ದಿನಾಂಕ: ***27-04-2020*** ರಂದು ಸಮಯ ಬೆಳಿಗ್ಗೆ ***7-30*** ಗಂಟೆಗೆ ಅಬಕಾರಿ ನೀರಿಕ್ಷಕರು ಸಿಂದಗಿ ಇವರ ವ್ಯಾಪ್ತಿಗೆ ಬರುವ ಚಿಕ್ಕರೂಗಿ- ಹಿಟ್ನಳ್ಳಿ ರಸ್ತೆಯ ಕೆನಾಲ್ ಬ್ರೀಡ್ಜ ಹತ್ತಿರ ದ್ವಿ ಚಕ್ರ ವಾಹನದ ಮೇಲೆ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುತ್ತಿರುವಾಗ ಅಬಕಾರಿ ಪೋಲಿಸರು ದಾಳಿ ಮಾಡಿ ನಿಮ್ಮ ಬಳಿ ***10*** ಲೀ ಕಳ್ಳಭಟ್ಟಿ ಸಾರಾಯಿ ಮತ್ತು ದ್ವಿ ಚಕ್ರ ವಾಹನವನ್ನು ಜಪ್ತುಪಡಿಸಿಕೊಂಡಿದ್ದು, ಕರ್ನಾಟಕ ಅಬಕಾರಿ ಕಾಯ್ದೆ ಕಲಂ ***32*** ಮತ್ತು ***38*** ಎ ಅಡಿಯಲ್ಲಿ ದಂಡಾನಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ***?***

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗಾು ಸ್ಥಳದಲ್ಲಿ ನೀನು ನಿನ್ನ ದ್ವಿ ಚಕ್ರ ವಾಹನದ ಮೇಲೆ ಅಕ್ರಮವಾಗಿ ನಶೆ ಪದಾರ್ಥಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿದ್ದು ಸದರಿ ಆ ಪದಾರ್ಥವು ನಶೆ ಹೊಂದುವಂತಹ ಪದಾರ್ಥ ಎಂಬ ಬಗ್ಗೆ ಗೊತ್ತಿದ್ದರು ಸಹ ಹಾಗೆ ಮಾರಾಟ ಹಾಗೂ ಸಾಗಾಟಣೆ ಮಾಡುತ್ತಿದ್ದರಿಂದ ಆ ಮೂಲಕ ಕಲಂ ***273*** ಐಪಿಸಿ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಈ ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಈ ಮೇಲ್ಕಂಡ ಆರೋಪದ ಬಗ್ಗೆ ಆಪಾದಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು ನಂತರ ಅವರು ನೀಡಿದ ಉತ್ತರಗಳನ್ನು ಸತ್ಯವಾಗಿ ಮತ್ತು ಸರಿಯಾಗಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.

(ಮಹಾಂತೇಶ ಜಿ. ಭೂಸಗೋಳ)
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ, ಸಿಂದಗಿ.

ದಿನಾಂಕ ***09*** ನೇ ಮೇ ***2023***

## <u>ಆರೋಪಣೆ</u>

ಈ ಮೇಲಿನ ದೋಷಾರೋಪಣೆಯನ್ನು ಮೇಲಿನ ಆರೋಪಿಗಳಿಗೆ ಕನ್ನಡದಲ್ಲಿ ಓದಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಗಿದೆ:

ಪ್ರ ***1:*** ಈಗ ಓದಿ ವಿವರಿಸಿ ಹೇಳಿದ ನಿಮ್ಮ ಮೇಲಿನ ದೋಷಾರೋಪಣೆ ಅರ್ಥವಾಯಿತೇ***?***

ಉ: ***1.***

ಪ್ರ ***2:*** ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿ ಸುವಿರೋ***?***

ಉ: ***1.***

(ಮಹಾಂತೇಶ ಜಿ. ಭೂಸಗೋಳ)
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ.